# ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1992

(1992 ರ ಅಧಿನಿಯಮ ಸಂಖ್ಯೆ 22)

**[19.4.2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 65 ರಿಂದ 72 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ - I**

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ - II**

**ಆದೇಶಗಳನ್ನು ಹೊರಡಿಸಲು ಹಾಗೂ ರಫ್ತು ಮತ್ತು ಆಮದು ನೀತಿಯನ್ನು ಪ್ರಕಟಿಸಲು ಕೇಂದ್ರ ಸರ್ಕಾರದ ಅಧಿಕಾರ**

3. ಆಮದುಗಳು ಮತ್ತು ರಫ್ತುಗಳ ಸಂಬಂಧದಲ್ಲಿ ಉಪಬಂಧಗಳನ್ನು ಕಲ್ಪಿಸುವ ಅಧಿಕಾರ
4. ಪ್ರಸ್ತುತ ಆದೇಶಗಳ ಮುಂದುವರಿಯುವಿಕೆ
5. ರಫ್ತು ಮತ್ತು ಆಮದು ನೀತಿ
6. ಮಹಾ ನಿರ್ದೇಶಕನ ನೇಮಕಾತಿ ಮತ್ತು ಅವನ ಪ್ರಕಾರ್ಯಗಳು

**ಅಧ್ಯಾಯ - III**

**ಆಮದುದಾರ - ರಫ್ತುದಾರರ ಗೋಪ್ಯ ಸಂಖ್ಯೆ ಮತ್ತು ಲೈಸೆನ್ಸ್**

7. ಆಮದುದಾರ - ರಫ್ತುದಾರರ ಗೋಪ್ಯ ಸಂಖ್ಯೆ
8. ಆಮದುದಾರ - ರಫ್ತುದಾರರ ಗೋಪ್ಯ ಸಂಖ್ಯೆಯ ಅಮಾನತು ಮತ್ತು ರದ್ದಿಯಾತಿ
9. ಲೈಸೆನ್ಸಿನ ನೀಡಿಕೆ, ಅಮಾನತು ಮತ್ತು ರದ್ದಿಯಾತಿ

**ಅಧ್ಯಾಯ - IV**

**ಶೋಧನೆ, ಅಭಿಗ್ರಹಣ, ದಂಡ ಮತ್ತು ವಶಪಡಿಸಿಕೊಳ್ಳುವುದು**

10. ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಿಸಿದ ಅಧಿಕಾರ
11. ಈ ಅಧಿನಿಯಮದ ಉಪಬಂಧಗಳು, ನಿಯಮಗಳು, ಆದೇಶಗಳು ಮತ್ತು ರಫ್ತು ಮತ್ತು ಆಮದು ನೀತಿಯ ಉಲ್ಲಂಘನೆ
12. ದಂಡ ಅಥವಾ ವಶಪಡಿಸಿಕೊಳ್ಳುವಿಕೆಯು ಇತರ ಶಿಕ್ಷೆಗಳಿಗೆ ಅಡ್ಡಿಪಡಿಸದಿರುವುದು
13. ನ್ಯಾಯನಿರ್ಣಯ ಪ್ರಾಧಿಕಾರ

14. ಸರಕುಗಳು ಮುಂತಾದವುಗಳ ಮಾಲೀಕನಿಗೆ ಅವಕಾಶ ನೀಡುವುದು

## ಅಧ್ಯಾಯ - V

## ಅಪೀಲು ಮತ್ತು ಪುನರೀಕ್ಷಣೆ

15. ಅಪೀಲು

16. ಪುನರೀಕ್ಷಣೆ

17. ನ್ಯಾಯನಿರ್ಣಯ ಮತ್ತು ಇತರ ಪ್ರಾಧಿಕಾರಗಳ ಅಧಿಕಾರಗಳು

## ಅಧ್ಯಾಯ - VI

## ಸಂಕೀರ್ಣ

18. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

19. ನಿಯಮ ರಚನಾಧಿಕಾರ

20. ನಿರಸನ ಮತ್ತು ಉಳಿಸುವಿಕೆಗಳು

# ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1992

(1992 ರ ಅಧಿನಿಯಮ ಸಂಖ್ಯೆ 22)

[7ನೇ ಆಗಸ್ಟ್, 1992]

ಭಾರತದ ಒಳಕ್ಕೆ ಆಮದು ಮಾಡಿಕೊಳ್ಳಲು ಅನುಕೂಲ ಮಾಡುವ ಮತ್ತು ಭಾರತದಿಂದ ರಫ್ತು ಮಾಡುವುದನ್ನು ಹೆಚ್ಚಿಸುವ ಮೂಲಕ ವಿದೇಶಿ ವ್ಯಾಪಾರದ ಅಭಿವೃದ್ಧಿ ಮತ್ತು ವಿನಿಯಮನಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದ 11 ರಿಂದ 14ರ ವರೆಗಿನ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಉಳಿದ ಉಪಬಂಧಗಳು 1992ರ ಜೂನ್ 19ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನ್ಯಾಯ ನಿರ್ಣಯ ಪ್ರಾಧಿಕಾರ" ಎಂದರೆ 13ನೇ ಪ್ರಕರಣದಲ್ಲಿ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಲಾದ ಪ್ರಾಧಿಕಾರ;

(ಬಿ) "ಅಪೀಲು ಪ್ರಾಧಿಕಾರ" ಎಂದರೆ 15ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಲಾದ ಪ್ರಾಧಿಕಾರ;

(ಸಿ) "ವಾಹನ" ಎಂದರೆ ಯಾವುದೇ ವಾಹನ, ನೌಕೆ, ವಿಮಾನ ಅಥವಾ ಯಾವುದೇ ಪ್ರಾಣಿಯೂ ಸೇರಿದಂತೆ ಸಾರಿಗೆಯ ಯಾವುದೇ ಇತರ ಸಾಧನ;

(ಡಿ) "ಮಹಾ ನಿರ್ದೇಶಕ" ಎಂದರೆ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ವಿದೇಶಿ ವ್ಯಾಪಾರದ ಮಹಾನಿರ್ದೇಶಕ;

(ಇ) "ಆಮದು" ಮತ್ತು "ರಫ್ತು" ಎಂದರೆ ಯಾವುವೇ ಸರಕುಗಳನ್ನು ಭೂಮಿ, ಸಮುದ್ರ ಅಥವಾ ವಿಮಾನ - ಇವುಗಳ ಮೂಲಕ ಅನುಕ್ರಮವಾಗಿ ಭಾರತದೊಳಗೆ ತರಿಸಿಕೊಳ್ಳುವುದು ಅಥವಾ ಭಾರತದಿಂದ ಹೊರಕ್ಕೆ ಕಳುಹಿಸಿಕೊಡುವುದು;

(ಎಫ್) "ಆಮದುದಾರ - ರಫ್ತುದಾರರ ಗೋಪ್ಯ ಸಂಖ್ಯೆ" ಎಂದರೆ 7ನೇ ಪ್ರಕರಣದ ಮೇರೆಗೆ ನೀಡಲಾದ ಗೋಪ್ಯ ಸಂಖ್ಯೆ;

(ಜಿ) "ಲೈಸೆನ್ಸ್" ಎಂದರೆ ಆಮದು ಮಾಡಲು ಮತ್ತು ರಫ್ತು ಮಾಡಲು ಇರುವ ಲೈಸೆನ್ಸ್ ಮತ್ತು ಅದು ಸೀಮಾಸುಂಕ ತೀರಿಕೆ ಪರ್ಮಿಟ್ಟನ್ನು ಮತ್ತು ಈ ಅಧಿನಿಯಮದ ಮೇರೆಗೆ ನೀಡಿರುವ ಅಥವಾ ಮಂಜೂರು ಮಾಡಿರುವ ಯಾವುದೇ ಇತರ ಅನುಮತಿ ಪತ್ರವನ್ನು ಒಳಗೊಳ್ಳುತ್ತದೆ;

(ಹೆಚ್) "ಆದೇಶ" ಎಂದರೆ 3ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ಯಾವುದೇ ಆದೇಶ;

(ಐ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ – II

### ಆದೇಶಗಳನ್ನು ಹೊರಡಿಸಲು ಹಾಗೂ ರಫ್ತು ಮತ್ತು ಆಮದು ನೀತಿಯನ್ನು ಪ್ರಕಟಿಸಲು ಕೇಂದ್ರ ಸರ್ಕಾರದ ಅಧಿಕಾರ

**3. ಆಮದುಗಳು ಮತ್ತು ರಫ್ತುಗಳ ಸಂಬಂಧದಲ್ಲಿ ಉಪಬಂಧಗಳನ್ನು ಕಲ್ಪಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆಮದಿಗೆ ಅನುಕೂಲ ಮಾಡುವ ಮತ್ತು ರಫ್ತನ್ನು ಹೆಚ್ಚಿಸುವ ಮೂಲಕ ವಿದೇಶಿ ವ್ಯಾಪಾರದ ಅಭಿವೃದ್ಧಿ ಮತ್ತು ನಿಯಂತ್ರಣಕ್ಕಾಗಿ ಉಪಬಂಧಗಳನ್ನು ಕಲ್ಪಿಸಬಹುದು.

(2) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಸರಕುಗಳ ಆಮದು ಅಥವಾ ರಫ್ತಿನ ಎಲ್ಲ ಪ್ರಕರಣಗಳಲ್ಲಿ ಅಥವಾ ನಿರ್ದಿಷ್ಟ ಪ್ರಕರಣಗಳ ವರ್ಗಗಳಲ್ಲಿ ಮತ್ತು ಆದೇಶದ ಮೂಲಕ ಅಥವಾ ಆದೇಶದ ಮೇರೆಗೆ ನೀಡಬಹುದಾದಂಥ ವಿನಾಯಿತಿಗಳು – ಯಾವುದಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು ಸರಕುಗಳ ಆಮದು ಅಥವಾ ರಫ್ತನ್ನು ನಿಷೇಧಿಸಲು, ನಿರ್ಬಂಧಿಸಲು ಅಥವಾ ಅನ್ಯಥಾ ನಿಯಂತ್ರಿಸಲು ಸಹ ಉಪಬಂಧ ಕಲ್ಪಿಸಬಹುದು.

(3) (2)ನೇ ಉಪ–ಪ್ರಕರಣದ ಮೇರೆಗಿನ ಯಾವುದೇ ಆದೇಶವು ಅನ್ವಯಿಸುವಂಥ ಎಲ್ಲ ಸರಕುಗಳನ್ನು, ಸೀಮಾಸುಂಕ ಅಧಿನಿಯಮ, 1962ರ 11ನೇ ಪ್ರಕರಣದ ಮೇರೆಗೆ ಆಮದು ಅಥವಾ ರಫ್ತನ್ನು ನಿಷೇಧಿಸಲಾದ ಸರಕುಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಪರಿಣಾಮ ಹೊಂದತಕ್ಕದ್ದು.

**4. ಪ್ರಸ್ತುತ ಆದೇಶಗಳ ಮುಂದುವರಿಯುವಿಕೆ.–** ಆಮದು ಮತ್ತು ರಫ್ತು (ನಿಯಂತ್ರಣ) ಅಧಿನಿಯಮ, 1947ರ ಮೇರೆಗೆ ಹೊರಡಿಸಿರುವ ಮತ್ತು ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಎಲ್ಲ ಆದೇಶಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರ ಮಟ್ಟಿಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಮೇರೆಗೆ ಹೊರಡಿಸಲಾಗಿದೆ ಎಂದು ಭಾವಿಸತಕ್ಕದ್ದು.

**5. ರಫ್ತು ಮತ್ತು ಆಮದು ನೀತಿ.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ರಫ್ತು ಮತ್ತು ಆಮದು ನೀತಿಯನ್ನು ರೂಪಿಸಿ ಪ್ರಕಟಿಸಬಹುದು ಮತ್ತು ಅದೇ ರೀತಿ ಆ ನೀತಿಯನ್ನು ತಿದ್ದುಪಡಿ ಸಹ ಮಾಡಬಹುದು.

**6. ಮಹಾ ನಿರ್ದೇಶಕನ ನೇಮಕಾತಿ ಮತ್ತು ಅವನ ಪ್ರಕಾರ್ಯಗಳು.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯನ್ನು ವಿದೇಶಿ ವ್ಯಾಪಾರದ ಮಹಾನಿರ್ದೇಶಕನಾಗಿ ನೇಮಿಸಬಹುದು.

(2) ಮಹಾನಿರ್ದೇಶಕನು, ರಫ್ತು ಮತ್ತು ಆಮದು ನೀತಿಯನ್ನು ರೂಪಿಸುವಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡತಕ್ಕದ್ದು ಮತ್ತು ಆ ನೀತಿಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(3) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ, ಈ ಅಧಿನಿಯಮದ ಮೇರೆಗೆ (3, 5, 15, 16 ಮತ್ತು 19ನೇ ಪ್ರಕರಣಗಳ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ತಾನು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕರಣಗಳಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಮಹಾನಿರ್ದೇಶಕನು ಅಥವಾ ಮಹಾನಿರ್ದೇಶಕನಿಗೆ ಅಧೀನವಾಗಿರುವಂಥ ಇತರ ಅಧಿಕಾರಿಯು ಸಹಾ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

## ಅಧ್ಯಾಯ – III

## ಆಮದುದಾರ – ರಫ್ತುದಾರರ ಗೋಪ್ಯ ಸಂಖ್ಯೆ ಮತ್ತು ಲೈಸೆನ್ಸ್

**7. ಆಮದುದಾರ – ರಫ್ತುದಾರರ ಗೋಪ್ಯ ಸಂಖ್ಯೆ.**– ಯಾರೇ ವ್ಯಕ್ತಿಯು ಯಾವುದೇ ಆಮದು ಅಥವಾ ರಫ್ತನ್ನು, ಮಹಾನಿರ್ದೇಶಕನು ಆ ಸಂಬಂಧದಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯವಿಧಾನಕ್ಕೆ ಅನುಸಾರವಾಗಿ ಮಹಾನಿರ್ದೇಶಕನಾಗಲಿ ಅಥವಾ ಮಹಾನಿರ್ದೇಶಕನಿಂದ ಅಧಿಕಾರ ಪಡೆದ ಅಧಿಕಾರಿಯಾಗಲಿ ಆಮದುದಾರ – ರಫ್ತುದಾರರಿಗೆ ನೀಡಿದ ಗೋಪ್ಯ ಸಂಖ್ಯೆಯ ಮೇರೆಗಲ್ಲದೆ ಮಾಡತಕ್ಕದ್ದಲ್ಲ.

**8. ಆಮದುದಾರ– ರಫ್ತುದಾರರ ಗೋಪ್ಯ ಸಂಖ್ಯೆಯ ಅಮಾನತು ಮತ್ತು ರದ್ದಿಯಾತಿ.**– (1) (ಎ) ಯಾರೇ ವ್ಯಕ್ತಿಯು ಕೇಂದ್ರ ಉತ್ಪಾದನಾ ಸುಂಕ ಅಥವಾ ಸೀಮಾ ಸುಂಕಗಳ ಅಥವಾ ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಯಾವುದೇ ಕಾನೂನನ್ನು ಉಲ್ಲಂಘಿಸಿರುವಲ್ಲಿ ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಯಾವುದೇ ಇತರ ಆರ್ಥಿಕ ಅಪರಾಧ ಮಾಡಿರುವಲ್ಲಿ; ಅಥವಾ

(ಬಿ) ಯಾರೇ ವ್ಯಕ್ತಿಯು, ಯಾವುದೇ ಹೊರದೇಶಗಳೊಂದಿಗಿರುವ ಭಾರತದ ವ್ಯಾಪಾರ ಸಂಬಂಧಗಳಿಗೆ ಅಥವಾ ಆಮದು ಅಥವಾ ರಫ್ತು ಕಾರ್ಯದಲ್ಲಿ ತೊಡಗಿರುವ ಇತರ ವ್ಯಕ್ತಿಗಳ ಹಿತಾಸಕ್ತಿಗಳಿಗೆ ಗುರುತರವಾಗಿ ಪ್ರತಿಕೂಲವಾಗುವ ರೀತಿಯಲ್ಲಿ ರಫ್ತು ಅಥವಾ ಆಮದು ಮಾಡಿರುವನೆಂದು ಅಥವಾ ದೇಶದ ವಿಶ್ವಾಸಾರ್ಹತೆಗೆ ಅಥವಾ ಸರಕುಗಳಿಗೆ ಅಪಖ್ಯಾತಿ ತಂದಿರುವನೆಂದು ಮಹಾನಿರ್ದೇಶಕನು ನಂಬಲು ಕಾರಣವಿದ್ದಲ್ಲಿ,

ಮಹಾನಿರ್ದೇಶಕನು, ಆ ವ್ಯಕ್ತಿಯಿಂದ ದಾಖಲೆ ಅಥವಾ ಇತರ ಯಾವುದೇ ಮಾಹಿತಿಯನ್ನು ಕೇಳಬಹುದು ಮತ್ತು ಯಾವ ಕಾರಣಗಳ ಮೇಲೆ ಆಮದುದಾರ – ರಫ್ತುದಾರರ ಗೋಪ್ಯ ಸಂಖ್ಯೆಯನ್ನು ಅಮಾನತುಗೊಳಿಸಲು ಅಥವಾ ರದ್ದು ಪಡಿಸಲು ಉದ್ದೇಶಿಸಲಾಗಿದೆಯೋ ಆ ಕಾರಣಗಳನ್ನು ತಿಳಿಸಿ ಲಿಖಿತದಲ್ಲಿ ಆ ವ್ಯಕ್ತಿಗೆ ಒಂದು ನೋಟೀಸನ್ನು ನೀಡಿದ ತರುವಾಯ ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಸಮಯದೊಳಗೆ ಲಿಖಿತದಲ್ಲಿ ಒಂದು ಮನವಿಯನ್ನು ಸಲ್ಲಿಸಲು ಮತ್ತು ಅಹವಾಲನ್ನು ಹೇಳಿಕೊಳ್ಳಲು ಆ ವ್ಯಕ್ತಿಯು ಅಪೇಕ್ಷಿಸಿದರೆ ಅಂಥ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಆಮದುದಾರ – ರಫ್ತುದಾರರ ಗೋಪ್ಯ ಸಂಖ್ಯೆಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಗೆ ನೀಡಿರುವ ಯಾವುದೇ ಆಮದುದಾರ – ರಫ್ತುದಾರರ ಗೋಪ್ಯ ಸಂಖ್ಯೆಯನ್ನು ಅಮಾನತುಗೊಳಿಸಿರುವಲ್ಲಿ ಅಥವಾ ರದ್ದುಪಡಿಸಿರುವಲ್ಲಿ, ಮಹಾನಿರ್ದೇಶಕನು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಆ ವ್ಯಕ್ತಿಗೆ ನೀಡಿರುವ ವಿಶೇಷ ಲೈಸೆನ್ಸಿನ ಹೊರತು ಆ ವ್ಯಕ್ತಿಯು ಯಾವುವೇ ಸರಕುಗಳನ್ನು ಆಮದು ಮಾಡಲು ಅಥವಾ ರಫ್ತು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**9. ಲೈಸೆನ್ಸಿನ ನೀಡಿಕೆ, ಅಮಾನತು ಮತ್ತು ರದ್ದಿಯಾತಿ.**– (1) ಒಂದು ಲೈಸೆನ್ಸಿಗಾಗಿ ಅರ್ಜಿ ಸಲ್ಲಿಸುವಂಥ ವ್ಯಕ್ತಿಯ ಅಥವಾ ವ್ಯಕ್ತಿಗಳ ವರ್ಗದ ಸಂಬಂಧದಲ್ಲಿ ಅಥವಾ ನೀಡಿರುವ ಅಥವಾ ನವೀಕರಿಸಲಾಗಿರುವ ಯಾವುದೇ ಲೈಸೆನ್ಸಿನ ಸಂಬಂಧದಲ್ಲಿ ಕೇಂದ್ರ ಸರ್ಕಾರವು, ನಿಯಮಿಸಬಹುದಾದ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗಳಿಗೆ ಒಳಪಟ್ಟು ಫೀಜನ್ನು ವಿಧಿಸಬಹುದು.

(2) ಮಹಾನಿರ್ದೇಶಕ ಅಥವಾ ಅವನಿಂದ ಅಧಿಕಾರ ಪಡೆದಂಥ ಒಬ್ಬ ಅಧಿಕಾರಿಯು ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, ನಿಯಮಿಸಬಹುದಾದಂಥ ವರ್ಗ ಅಥವಾ ವರ್ಗಗಳ ಸರಕುಗಳ ಆಮದು ಅಥವಾ ರಫ್ತಿಗಾಗಿ ಲೈಸೆನ್ಸನ್ನು ನೀಡಬಹುದು ಅಥವಾ ನವೀಕರಿಸಬಹುದು ಅಥವಾ ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ಲಿಖಿತದಲ್ಲಿ ತನ್ನ ಕಾರಣಗಳನ್ನು ದಾಖಲಿಸಿದ ತರುವಾಯ ನಿರಾಕರಿಸಬಹುದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಲೈಸೆನ್ಸು,-

(ಎ) ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು;

(ಬಿ) ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು; ಮತ್ತು

(ಸಿ) ಹಾಗೆ ನಿಯಮಿಸಲಾದ ನಿಬಂಧನೆಗಳು, ಷರತ್ತುಗಳು ಮತ್ತು ನಿರ್ಬಂಧಗಳಿಗೆ ಸಂಬಂಧಿಸಿದಂತೆ ಲೈಸೆನ್ಸಿನಲ್ಲಿ ನಿಯಮಿಸಬಹುದಾದಂಥ ಅಥವಾ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು, ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

(4) ಮಹಾನಿರ್ದೇಶಕನು ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಅಧಿಕಾರ ಪಡೆದ ಅಧಿಕಾರಿಯು ಲಿಖಿತದಲ್ಲಿ, ನಿಯಮಿಸಬಹುದಾದ ಷರತ್ತುಗಳಿಗೆ ಒಳಪಟ್ಟು ಉಚಿತ ಮತ್ತು ಸಾಕಷ್ಟು ಕಾರಣಗಳನ್ನು ದಾಖಲಿಸಿ ಈ ಅಧಿನಿಯಮದ ಮೇರೆಗೆ ನೀಡಿರುವ ಯಾವುದೇ ಲೈಸೆನ್ಸನ್ನು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು:

ಪರಂತು, ಲೈಸೆನ್ಸುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶ ನೀಡಿದ ಹೊರತು ಹಾಗೆ ಅಮಾನತುಗೊಳಿಸತಕ್ಕದ್ದಲ್ಲ ಅಥವಾ ರದ್ದು ಮಾಡತಕ್ಕದ್ದಲ್ಲ.

(5) ಒಂದು ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಅಮಾನತುಗೊಳಿಸುವ ಅಥವಾ ರದ್ದುಪಡಿಸುವ ಆದೇಶದ ವಿರುದ್ಧದ ಅಪೀಲನ್ನು 15ನೇ ಪ್ರಕರಣದ ಮೇರೆಗೆ ಒಂದು ಆದೇಶದ ವಿರುದ್ಧ ಮಾಡಬಹುದಾದ ಅಪೀಲಿನ ರೀತಿಯಲ್ಲಿಯೇ ಮಾಡಿಕೊಳ್ಳಲು ಅವಕಾಶವಿರತಕ್ಕದ್ದು.

## ಅಧ್ಯಾಯ - IV

## ಶೋಧನೆ, ಅಭಿಗ್ರಹಣ, ದಂಡ ಮತ್ತು ವಶಪಡಿಸಿಕೊಳ್ಳುವುದು

**10. ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಿಸಿದ ಅಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ಅಗತ್ಯತೆಗಳು ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಯಾರೇ ವ್ಯಕ್ತಿಗೆ ಆವರಣದೊಳಗೆ ಪ್ರವೇಶಿಸಲು ಮತ್ತು ಸರಕುಗಳನ್ನು, ದಸ್ತಾವೇಜುಗಳನ್ನು, ವಸ್ತುಗಳನ್ನು ಮತ್ತು ವಾಹನಗಳನ್ನು ಪರಿಶೀಲಿಸುವುದಕ್ಕೆ, ಅಭಿಗ್ರಹಿಸುವುದಕ್ಕೆ ಮತ್ತು ಶೋಧಿಸುವುದಕ್ಕೆ ಸಂಬಂಧಿಸಿದಂತೆ ಅಂಥ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಗೆ ಅಧಿಕಾರ ನೀಡಬಹುದು.

(2) ಶೋಧನೆ ಹಾಗೂ ಅಭಿಗ್ರಹಣಗಳಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಶೋಧನೆ ಮತ್ತು ಅಭಿಗ್ರಹಣಕ್ಕೆ ಅನ್ವಯವಾಗತಕ್ಕದ್ದು.

**11. ಈ ಅಧಿನಿಯಮದ ಉಪಬಂಧಗಳು, ನಿಯಮಗಳು, ಆದೇಶಗಳು ಮತ್ತು ರಫ್ತು ಮತ್ತು ಆಮದು ನೀತಿಯ ಉಲ್ಲಂಘನೆ.**- (1) ಯಾರೇ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಹಾಗೂ ಆದೇಶಗಳ ಮತ್ತು ರಫ್ತು ಹಾಗೂ ಆಮದು ನೀತಿಗೆ ಅನುಸಾರವಾಗಿ ಅಲ್ಲದೆ ಯಾವುದೇ ರಫ್ತನ್ನು ಅಥವಾ ಆಮದನ್ನು ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಅಥವಾ ಆದೇಶಗಳನ್ನು ಅಥವಾ ರಫ್ತು ಹಾಗೂ ಆಮದು ನೀತಿಯನ್ನು ಉಲ್ಲಂಘಿಸಿ ಯಾವುದೇ ರಫ್ತು ಅಥವಾ ಆಮದು ಮಾಡಿದಲ್ಲಿ ಅಥವಾ ಅದಕ್ಕೆ ದುಷ್ಪ್ರೇರಣೆ ನೀಡಿದಲ್ಲಿ ಅಥವಾ ಹಾಗೆ ಮಾಡಲು ಯತ್ನಿಸಿದಲ್ಲಿ ಅವನು ಒಂದು ಸಾವಿರ ರೂಪಾಯಿಗೆ ಮೀರದ ಅಥವಾ ಯಾವ ಸರಕುಗಳ ಸಂಬಂಧದಲ್ಲಿ ಉಲ್ಲಂಘನೆ ಮಾಡಲಾಗಿದೆಯೋ ಅಥವಾ ಮಾಡಲು

ಯತ್ನಿಸಲಾಗಿದೆಯೋ ಅಂಥ ಸರಕುಗಳ ಮೌಲ್ಯದ ಐದು ಪಟ್ಟು ಹಣ, ಇದರಲ್ಲಿ ಯಾವುದು ಹೆಚ್ಚೋ ಅಂಥ ದಂಡನೆಗೆ ಗುರಿಯಾಗತಕ್ಕದ್ದು.

(3) ನ್ಯಾಯ ನಿರ್ಣಯ ಪ್ರಾಧಿಕಾರವು ಒಬ್ಬ ವ್ಯಕ್ತಿಗೆ ನೋಟೀಸು ನೀಡಿದ ನಂತರ ಆ ವ್ಯಕ್ತಿಯು ಯಾವುದೇ ಉಲ್ಲಂಘನೆಯನ್ನು ಒಪ್ಪಿಕೊಂಡಲ್ಲಿ ನ್ಯಾಯ ನಿರ್ಣಯ ಪ್ರಾಧಿಕಾರವು ಅಂಥ ಮೊಕದ್ದಮೆ ಅಥವಾ ಮೊಕದ್ದಮೆಗಳ ವರ್ಗಗಳಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಇತ್ಯರ್ಥಪಡಿಸುವ ಮೂಲಕ ಆ ವ್ಯಕ್ತಿಯು ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ಧರಿಸಬಹುದು.

(4) ಈ ಅಧಿನಿಯಮದ ಮೇರೆಗೆ ವಿಧಿಸಿದ ದಂಡನೆಯನ್ನು ಒಂದು ವೇಳೆ ಸಂದಾಯ ಮಾಡದಿದ್ದಲ್ಲಿ ಅದನ್ನು ಭೂ-ಕಂದಾಯದ ಬಾಕಿಯಂತೆ ವಸೂಲು ಮಾಡಬಹುದು ಮತ್ತು ದಂಡದ ಹಣವನ್ನು ಸಂದಾಯ ಮಾಡಲು ತಪ್ಪಿದ್ದರಿಂದ ಸಂಬಂಧಪಟ್ಟ ವ್ಯಕ್ತಿಯ ಆಮದುದಾರ - ರಫ್ತುದಾರರ ಗೋಪ್ಯ ಸಂಖ್ಯೆಯನ್ನು ದಂಡದ ಹಣ ಸಂದಾಯ ಮಾಡುವವರೆಗೆ ನ್ಯಾಯ ನಿರ್ಣಯ ಪ್ರಾಧಿಕಾರವು ಅಮಾನತುಗೊಳಿಸಬಹುದು.

(5) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮಗಳನ್ನು ಅಥವಾ ಆದೇಶಗಳನ್ನು ಅಥವಾ ರಫ್ತು ಮತ್ತು ಆಮದಿನ ನೀತಿಯನ್ನು ಉಲ್ಲಂಘಿಸಿರುವಲ್ಲಿ ಅಥವಾ ಉಲ್ಲಂಘಿಸುತ್ತಿರುವಲ್ಲಿ ಅಥವಾ ಉಲ್ಲಂಘಿಸಲು ಯತ್ನಿಸಿದಲ್ಲಿ ಯಾವುದೇ ಭಾಂಗಿ, ಹೊದಿಕೆ, ಪೆಟ್ಟಿಗೆಯೊಂದಿಗೆ ಸರಕನ್ನು ಮತ್ತು ಯಾವುದೇ ವಾಹನವನ್ನು ನಿಯಮಿಸಬಹುದಾದಂಥ ಅಗತ್ಯತೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನ್ಯಾಯನಿರ್ಣಯ ಪ್ರಾಧಿಕಾರವು ವಶಪಡಿಸಿಕೊಳ್ಳುವುದಕ್ಕೆ ಅವು ಗುರಿಯಾಗತಕ್ಕದ್ದು.

(6) (5)ನೇ ಉಪ-ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಸರಕುಗಳು ಅಥವಾ ವಾಹನವನ್ನು, ಸಂಬಂಧಪಟ್ಟ ವ್ಯಕ್ತಿಯು ಸಂದರ್ಭಾನುಸಾರ, ಸರಕುಗಳ ಅಥವಾ ವಾಹನದ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ವಿಮೋಚನಾ ಶುಲ್ಕಗಳನ್ನು ಸಂದಾಯ ಮಾಡಿದ ತರುವಾಯ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ನ್ಯಾಯನಿರ್ಣಯ ಪ್ರಾಧಿಕಾರವು ಅವುಗಳನ್ನು ಬಿಡುಗಡೆ ಮಾಡಬಹುದು.

**12. ದಂಡ ಅಥವಾ ವಶಪಡಿಸಿಕೊಳ್ಳುವಿಕೆಯು ಇತರ ಶಿಕ್ಷೆಗಳಿಗೆ ಅಡ್ಡಿಪಡಿಸದಿರುವುದು.-** ಈ ಅಧಿನಿಯಮದ ಮೇರೆಗೆ ವಿಧಿಸಲಾದ ಯಾವುದೇ ದಂಡ ಅಥವಾ ವಶಪಡಿಸಿಕೊಳ್ಳುವುದರಿಂದ ಬಾಧಿತನಾದ ವ್ಯಕ್ತಿಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ, ವಿಧಿಸಬಹುದಾದ ಯಾವುದೇ ಇತರ ಶಿಕ್ಷೆಗೆ ಅವನು ಗುರಿಯಾಗುವುದನ್ನು ಅಡ್ಡಿಪಡಿಸತಕ್ಕದ್ದಲ್ಲ.

**13. ನ್ಯಾಯನಿರ್ಣಯ ಪ್ರಾಧಿಕಾರ.-** ಮಹಾನಿರ್ದೇಶಕನು ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಮಿತಿಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಯಾವುದೇ ದಂಡವನ್ನು ವಿಧಿಸಬಹುದು ಅಥವಾ ಯಾವುದೇ ವಶಪಡಿಸಿಕೊಳ್ಳುವಂತೆ ನ್ಯಾಯ ನಿರ್ಣಯ ಮಾಡಬಹುದು.

**14. ಸರಕುಗಳು ಮುಂತಾದವುಗಳ ಮಾಲೀಕನಿಗೆ ಅವಕಾಶ ನೀಡುವುದು.-** ಸರಕುಗಳ ಅಥವಾ ವಾಹನದ ಮಾಲೀಕನಿಗೆ ಅಥವಾ ಸಂಬಂಧಪಟ್ಟ ಇತರ ವ್ಯಕ್ತಿಗೆ,-

(ಎ) ಯಾವ ಕಾರಣಗಳ ಮೇಲೆ ದಂಡ ವಿಧಿಸಲು ಅಥವಾ ಅಂಥ ಸರಕುಗಳನ್ನು ಅಥವಾ ವಾಹನವನ್ನು ವಶಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಆ ಕಾರಣಗಳನ್ನು ತಿಳಿಸಿ; ಮತ್ತು

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಸಮಯದೊಳಗೆ ಅದರಲ್ಲಿ ನಮೂದಿಸಲಾದ ದಂಡ ವಿಧಿಸುವುದರ ಅಥವಾ ವಶಪಡಿಸಿಕೊಳ್ಳುವುದರ ವಿರುದ್ಧ ಮತ್ತು ಈ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅಪೇಕ್ಷಿಸಿದಲ್ಲಿ ಹಾಗೆ ಮಾಡಲು ಲಿಖಿತದಲ್ಲಿ ಮನವಿ ಸಲ್ಲಿಸಲು

– ಅವನಿಗೆ ಒಂದು ಲಿಖಿತ ನೋಟೀಸನ್ನು ನೀಡಿದ್ದ ಹೊರತು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

## ಅಧ್ಯಾಯ – V

## ಅಪೀಲು ಮತ್ತು ಪುನರೀಕ್ಷಣೆ

**15. ಅಪೀಲು.**– (1) ಈ ಅಧಿನಿಯಮದ ಮೇರೆಗೆ ನ್ಯಾಯ ನಿರ್ಣಯ ಪ್ರಾಧಿಕಾರವು ಮಾಡಿರುವ ಯಾವುದೇ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಒಂದು ಅಪೀಲನ್ನು,–

(ಎ) ತೀರ್ಮಾನ ಅಥವಾ ಆದೇಶವನ್ನು ಮಹಾನಿರ್ದೇಶಕನು ಮಾಡಿರುವಲ್ಲಿ, ಕೇಂದ್ರ ಸರ್ಕಾರಕ್ಕೆ;

(ಬಿ) ತೀರ್ಮಾನ ಅಥವಾ ಆದೇಶವನ್ನು ಮಹಾನಿರ್ದೇಶಕನ ಅಧೀನ ಅಧಿಕಾರಿಯು ಮಾಡಿರುವಲ್ಲಿ, ಮಹಾನಿರ್ದೇಶಕನಿಗೆ ಅಥವಾ ಅಪೀಲನ್ನು ಸುನಾವಣೆಮಾಡಲು ಮಹಾ ನಿರ್ದೇಶಕನಿಂದ ಅಧಿಕೃತನಾದ ನ್ಯಾಯನಿರ್ಣಯ ಪ್ರಾಧಿಕಾರಕ್ಕಿಂತ ವರಿಷ್ಠರಾಗಿರುವ ಯಾರೇ ಅಧಿಕಾರಿಗೆ

– ತೀರ್ಮಾನ ಅಥವಾ ಆದೇಶವನ್ನು ಅಂಥ ವ್ಯಕ್ತಿಗೆ ಜಾರಿ ಮಾಡಿದ ದಿನಾಂಕದಿಂದ ನಲವತ್ತೈದು ದಿನಗಳ ಅವಧಿಯೊಳಗೆ ಸಲ್ಲಿಸಬಹುದು:

ಪರಂತು, ಮೇಲೆ ತಿಳಿಸಿದ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಅಪೀಲುದಾರನು ಪ್ರತಿಬಂಧಿತನಾಗಿದ್ದನೆಂದು ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅಂಥ ಅಪೀಲನ್ನು ಸಲ್ಲಿಸಲು ಇನ್ನೂ ಹೆಚ್ಚಿನ ಮೂವತ್ತು ದಿನಗಳ ಅವಧಿಯ ಅನುಮತಿ ನೀಡಬಹುದು:

ಮತ್ತೂ ಪರಂತು, ದಂಡವನ್ನು ಅಥವಾ ವಿಮೋಚನಾ ಶುಲ್ಕಗಳನ್ನು ವಿಧಿಸುವ ತೀರ್ಮಾನ ಅಥವಾ ಆದೇಶದ ವಿರುದ್ಧ ಸಲ್ಲಿಸುವ ಒಂದು ಅಪೀಲಿನ ಸಂದರ್ಭದಲ್ಲಿ ಅಪೀಲುದಾರನು ದಂಡದ ಮೊತ್ತವನ್ನು ಅಥವಾ ವಿಮೋಚನಾ ಶುಲ್ಕಗಳನ್ನು ಠೇವಣಿ ಇಟ್ಟಿದ್ದ ಹೊರತು ಅಂಥ ಯಾವುದೇ ಅಪೀಲನ್ನು ಪುರಸ್ಕರಿಸತಕ್ಕದ್ದಲ್ಲ:

ಮತ್ತೂ ಪರಂತು, ಇಡಬೇಕಾದ ಠೇವಣಿಯಿಂದಾಗಿ ಅಪೀಲುದಾರನಿಗೆ ಅನುಚಿತ ಕಷ್ಟ ಉಂಟಾಗುವುದೆಂದು ಅಪೀಲು ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ತನ್ನ ವಿವೇಚನಾನುಸಾರ ಅಂಥ ಠೇವಣಿಯನ್ನು ಬೇಷರತ್ತಾಗಿಯಾಗಲಿ ಅಥವಾ ತಾನು ವಿಧಿಸಬಹುದಾದಂಥ ಷರತ್ತಿಗೊಳಪಟ್ಟಾಗಲಿ ಬಿಟ್ಟುಬಿಡಬಹುದು.

(2) ಅಪೀಲುದಾರನು ತನ್ನ ಅಹವಾಲನ್ನು ಹೇಳಿಕೊಳ್ಳಲು ಅಪೇಕ್ಷಿಸಿದರೆ, ಅಪೀಲು ಪ್ರಾಧಿಕಾರವು ಹಾಗೆ ಮಾಡಲು ಅವನಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ತಾನು ಅವಶ್ಯಕವೆಂದು ಪರಿಗಣಿಸುವಂಥ ಇನ್ನೂ ಹೆಚ್ಚಿನ ವಿಚಾರಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಮಾಡಿದ ತರುವಾಯ, ಯಾವ ತೀರ್ಮಾನ ಅಥವಾ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಅಂಥ ತೀರ್ಮಾನ ಅಥವಾ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ವಿಪರ್ಯಯಗೊಳಿಸಿ, ಅಥವಾ ಪ್ರಕರಣವನ್ನು ಸಂದರ್ಭಾನುಸಾರ ಹೊಸದಾಗಿ ನ್ಯಾಯ ನಿರ್ಣಯಕ್ಕಾಗಿ ಅಥವಾ ತೀರ್ಮಾನಕ್ಕಾಗಿ ಅವಶ್ಯವಿದ್ದಲ್ಲಿ ಹೆಚ್ಚಿನ ಸಾಕ್ಷ್ಯ ಪಡೆದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳೊಂದಿಗೆ ಪ್ರಕರಣವನ್ನು ಹಿಂದಕ್ಕೆ ಕಳುಹಿಸಬಹುದು:

ಪರಂತು, ದಂಡವನ್ನು ಅಥವಾ ವಿಮೋಚನಾ ಶುಲ್ಕಗಳನ್ನು ಹೆಚ್ಚಿಸುವ ಅಥವಾ ವಿಧಿಸುವ ಅಥವಾ ಹೆಚ್ಚಿನ ಮೌಲ್ಯದ ಸರಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಒಂದು ಆದೇಶವನ್ನು, ಈ ಪ್ರಕರಣದ ಮೇರೆಗೆ ಅಪೀಲುದಾರನು ಒಂದು ಮನವಿಯನ್ನು ಮಾಡಿಕೊಳ್ಳಲು ಮತ್ತು ತನ್ನ ಪ್ರತಿರಕ್ಷೆಗಾಗಿ ಅಹವಾಲು ಹೇಳಿಕೊಳ್ಳಲು ಅಪೇಕ್ಷಿಸಿದಲ್ಲಿ, ಹಾಗೆ ಮಾಡಲು ಅವನಿಗೆ ಅವಕಾಶ ನೀಡಿದ ಹೊರತು ಮಾಡತಕ್ಕದ್ದಲ್ಲ.

(3) ಅಪೀಲು ಪ್ರಾಧಿಕಾರವು ಯಾವುದೇ ಅಪೀಲಿನ ಮೇಲೆ ಮಾಡಿರುವ ಆದೇಶವು ಅಂತಿಮವಾಗಿರತಕ್ಕದ್ದು.

**16. ಪುನರೀಕ್ಷಣೆ.**- ಅಪೀಲಿನ ಮೇಲೆ ಮಾಡಲಾಗಿರುವ ತೀರ್ಮಾನ ಅಥವಾ ಆದೇಶವಾಗಿರದ, ಆದರೆ ಮಹಾನಿರ್ದೇಶಕನು ಮಾಡಿರುವ ಯಾವುದೇ ತೀರ್ಮಾನ ಅಥವಾ ಆದೇಶದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು, ಅಥವಾ ಮಹಾನಿರ್ದೇಶಕನಿಗೆ ಅಧೀನವಾಗಿರುವ ಯಾರೇ ಅಧಿಕಾರಿಯು ಮಾಡಿರುವ ತೀರ್ಮಾನ ಅಥವಾ ಆದೇಶದ ಸಂದರ್ಭದಲ್ಲಿ ಮಹಾನಿರ್ದೇಶಕನು, ಸ್ವಪ್ರೇರಣೆಯಿಂದ ಅಥವಾ ಅನ್ಯಥಾ ದಂಡ ಅಥವಾ ವಿಮೋಚನಾ ಶುಲ್ಕಗಳನ್ನು ವಿಧಿಸುವ ಅಥವಾ ಮುಟ್ಟುಗೋಲು ಹಾಕಿಕೊಳ್ಳುವ ನ್ಯಾಯನಿರ್ಣಯದ ಒಂದು ತೀರ್ಮಾನ ಅಥವಾ ಆದೇಶವನ್ನು ಮಾಡಿರುವ ಮತ್ತು ಯಾವುದರ ವಿರುದ್ಧ ಅಪೀಲನ್ನು ಸಲ್ಲಿಸಲಾಗಿಲ್ಲವೋ ಆ ಯಾವುದೇ ವ್ಯವಹರಣೆಯ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ಮಹಾನಿರ್ದೇಶಕನು ಅಂಥ ತೀರ್ಮಾನ ಅಥವಾ ಆದೇಶದ ಸರಿತನ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು ಮತ್ತು ಅದರ ಮೇಲೆ ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಯಾವುದೇ ತೀರ್ಮಾನ ಅಥವಾ ಆದೇಶವನ್ನು-

(ಎ) ಅಂಥ ತೀರ್ಮಾನ ಅಥವಾ ಆದೇಶವನ್ನು ಏಕೆ ವ್ಯತ್ಯಾಸಗೊಳಿಸಬಾರದೆಂಬುದಕ್ಕೆ ಕಾರಣ ತೋರಿಸುವಂತೆ ನೋಟೀಸನ್ನು ಅಂಥ ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗಾಗಿ ಸ್ವೀಕರಿಸಿರುವ ಹೊರತು, ಮತ್ತು

(ಬಿ) ಮನವಿ ಮಾಡಿಕೊಳ್ಳಲು ಮತ್ತು ತನ್ನ ಪ್ರತಿರಕ್ಷಣೆಗಾಗಿ ಅಹವಾಲು ಹೇಳಿಕೊಳ್ಳಲು ಅಪೇಕ್ಷಿಸಿದಲ್ಲಿ ಹಾಗೆ ಮಾಡಲು ಅವನಿಗೆ ಒಂದು ಸೂಕ್ತ ಅವಕಾಶ ನೀಡಿದ ಹೊರತು

- ಅಂಥ ಯಾರೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮ ಉಂಟುಮಾಡುವಂತೆ ಈ ಪ್ರಕರಣದ ಮೇರೆಗೆ ವ್ಯತ್ಯಾಸಗೊಳ್ಳತಕ್ಕದ್ದಲ್ಲ.

**17. ನ್ಯಾಯನಿರ್ಣಯ ಮತ್ತು ಇತರ ಪ್ರಾಧಿಕಾರಗಳ ಅಧಿಕಾರಗಳು.**- (1) ಈ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯ ನಿರ್ಣಯ ಮಾಡುವ ಅಥವಾ ಯಾವುದೇ ಅಪೀಲನ್ನು ಸುನಾವಣೆ ಮಾಡುವ ಅಥವಾ ಪುನರೀಕ್ಷಣೆಯ ಯಾವುದೇ ಅಧಿಕಾರಗಳನ್ನು ಚಲಾಯಿಸುವ ಪ್ರತಿಯೊಂದು ಪ್ರಾಧಿಕಾರವು, ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಒಂದು ದಾವೆಯನ್ನು ಅಧಿವಿಚಾರಣೆ ಮಾಡುವಾಗ ಒಂದು ಸಿವಿಲ್ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಹೊಂದಿರತಕ್ಕ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿಗಳನ್ನು ಸಮನು ಮಾಡುವುದು ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಅಫಿಡವಿಟ್ ಮೇಲೆ ಸಾಕ್ಷ್ಯವನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನುಗಳನ್ನು ಹೊರಡಿಸುವುದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯ ನಿರ್ಣಯ ಮಾಡುವ ಅಥವಾ ಯಾವುದೇ ಅಪೀಲಿನ ಸುನಾವಣೆ ಮಾಡುವ ಅಥವಾ ಪುನರೀಕ್ಷಣೆಯ ಯಾವುವೇ ಅಧಿಕಾರಗಳನ್ನು ಚಲಾಯಿಸುವ ಪ್ರತಿಯೊಂದು ಪ್ರಾಧಿಕಾರವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 345

ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಒಂದು ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯ ನಿರ್ಣಯ ಮಾಡುವ ಅಥವಾ ಯಾವುದೇ ಅಪೀಲಿನ ಸುನಾವಣೆ ಮಾಡುವ ಅಥವಾ ಪುನರೀಕ್ಷಣೆಯ ಯಾವುವೇ ಅಧಿಕಾರಗಳನ್ನು ಚಲಾಯಿಸುವ ಪ್ರತಿಯೊಂದು ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ಮಧ್ಯಕಾಲೀನ ಸ್ವರೂಪದ ಆದೇಶಗಳನ್ನು ಮಾಡುವ ಅಧಿಕಾರ ಹೊಂದಿರತಕ್ಕದ್ದು ಹಾಗೂ ಯಾವುದೇ ತೀರ್ಮಾನದ ಅಥವಾ ಆದೇಶದ ಪ್ರವರ್ತನೆಯನ್ನು ಸಾಕಷ್ಟು ಕಾರಣಗಳಿಗಾಗಿ ತಡೆಹಿಡಿಯುವ ಆದೇಶವನ್ನು ಸಹ ಮಾಡಬಹುದು.

(4) ಯಾವುದೇ ತೀರ್ಮಾನ ಅಥವಾ ಆದೇಶದಲ್ಲಿನ ಲಿಪಿಕ ಅಥವಾ ಗಣಿತದ ತಪ್ಪುಗಳನ್ನು ಅಥವಾ ಯಾವುದೇ ಆಕಸ್ಮಿಕ ಕೈತಪ್ಪಿನಿಂದಾಗಿ ಅಥವಾ ಲೋಪದಿಂದಾಗಿ ಅದರಲ್ಲಿ ಉಂಟಾಗುವ ಪ್ರಮಾದಗಳನ್ನು ಅಂಥ ತೀರ್ಮಾನ ಅಥವಾ ಆದೇಶವನ್ನು ಮಾಡಿರುವ ಪ್ರಾಧಿಕಾರವು ತಾನಾಗಿಯೇ ಅಥವಾ ಯಾರೇ ಪಕ್ಷಕಾರರು ಅರ್ಜಿ ನೀಡಿದ ಮೇಲೆ ಯಾವ ಸಮಯದಲ್ಲಾದರೂ ಸರಿಪಡಿಸಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ, ಮಾಡಲು ಉದ್ದೇಶಿಸಿರುವ ಯಾವುದೇ ಸರಿಪಡಿಸುವಿಕೆಯು ಯಾರೇ ವ್ಯಕ್ತಿಗೆ ಪ್ರತಿಕೂಲವಾಗಿ ಬಾಧಿಸುವಂಥ ಪರಿಣಾಮವನ್ನು ಬೀರುವಂತಿದ್ದರೆ, ಆ ವಿಷಯದಲ್ಲಿ ಮನವಿ ಸಲ್ಲಿಸಲು ಆ ವ್ಯಕ್ತಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಸರಿಪಡಿಸುವಿಕೆಯನ್ನು ಮಾಡತಕ್ಕದ್ದಲ್ಲ ಮತ್ತು ಅಂಥ ತೀರ್ಮಾನ ಅಥವಾ ಆದೇಶವನ್ನು ಮಾಡಿದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಸರಿಪಡಿಸುವಿಕೆಯನ್ನು ಮಾಡತಕ್ಕದ್ದಲ್ಲ.

## ಅಧ್ಯಾಯ - VI

### ಸಂಕೀರ್ಣ

**18. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಮೇರೆಗೆ ಮಾಡಿರುವ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಯಾವುದೇ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿರುವ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಯಾವುದೇ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**19. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಒಂದು ವಿಶೇಷ ಲೈಸೆನ್ಸನ್ನು ಯಾವ ರೀತಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬಹುದು;

(ಬಿ) 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವ ವಿನಾಯಿತಿಗಳಿಗೆ ಒಳಪಟ್ಟು ಮತ್ತು ಯಾವ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಫೀಜನ್ನು ವಿಧಿಸಬಹುದು ಮತ್ತು ಯಾವ ರೀತಿಯಲ್ಲಿ ಲೈಸೆನ್ಸನ್ನು ನೀಡಬಹುದು ಅಥವಾ ನವೀಕರಿಸಬಹುದು;

(ಸಿ) 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಯಾವ ಸರಕುಗಳ ವರ್ಗ ಅಥವಾ ವರ್ಗಗಳಿಗೆ ಲೈಸೆನ್ಸನ್ನು ನೀಡಬಹುದು;

(ಡಿ) 9ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ, ಯಾವ ನಮೂನೆಯಲ್ಲಿ ಮತ್ತು ಯಾವ ನಿಬಂಧನೆಗಳು, ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಲೈಸೆನ್ಸನ್ನು ನೀಡಬಹುದು;

(ಇ) 9ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ಒಂದು ಲೈಸೆನ್ಸನ್ನು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು;

(ಎಫ್) 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವ ಆವರಣಗಳ, ಸರಕುಗಳ, ದಸ್ತಾವೇಜುಗಳ, ವಸ್ತುಗಳ ಮತ್ತು ವಾಹನಗಳ ಸಂಬಂಧದಲ್ಲಿ ಮತ್ತು ಯಾವ ಅಗತ್ಯತೆ ಮತ್ತು ಷರತ್ತುಗಳಿಗೆ ಒಳಪಟ್ಟು ಪ್ರವೇಶ, ಶೋಧನೆ, ಪರಿಶೀಲನೆ ಮತ್ತು ಅಭಿಗ್ರಹಣದ ಅಧಿಕಾರವನ್ನು ಚಲಾಯಿಸಬಹುದು;

(ಜಿ) 11ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಯಾವ ಮೊಕದ್ದಮೆಗಳ ವರ್ಗ ಅಥವಾ ವರ್ಗಗಳಿಗೆ ಮತ್ತು ಯಾವ ರೀತಿ ಇತ್ಯರ್ಥದ ಮೂಲಕ ಮೊತ್ತವನ್ನು ನಿರ್ಣಯಿಸಬಹುದು;

(ಹೆಚ್) 11ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಯಾವ ಅವಶ್ಯಕತೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸರಕುಗಳು ಮತ್ತು ವಾಹನಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು;

(ಐ) 11ನೇ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ ಯಾವ ರೀತಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ವಿಮೋಚನಾ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ ಸರಕುಗಳನ್ನು ಮತ್ತು ವಾಹನಗಳನ್ನು ಬಿಡುಗಡೆ ಮಾಡಬಹುದು;

(ಜೆ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಅವುಗಳ ಸಂಬಂಧದಲ್ಲಿ ಉಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮ ಮತ್ತು ಪ್ರತಿಯೊಂದು ಆದೇಶವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಅಥವಾ ಆದೇಶವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**20. ನಿರಸನ ಮತ್ತು ಉಳಿಸುವಿಕೆಗಳು.**- (1) ಆಮದು ಮತ್ತು ರಫ್ತು (ನಿಯಂತ್ರಣ) ಅಧಿನಿಯಮ, 1947 (1947ರ 18) ಮತ್ತು ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ವಿನಿಯಮನ) ಅಧ್ಯಾದೇಶ, 1992 (1992ರ 11)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಆಮದು ಮತ್ತು ರಫ್ತು (ನಿಯಂತ್ರಣ) ಅಧಿನಿಯಮ, 1947 (1947ರ 18)ರ ನಿರಸನವು-

(ಎ) ಹಾಗೆ ನಿರಸನಗೊಂಡ ಅಧಿನಿಯಮದ ಹಿಂದಿನ ಕಾರ್ಯಾಚರಣೆ ಅಥವಾ ಕ್ರಮಬದ್ಧವಾಗಿ ಮಾಡಿರುವ ಅಥವಾ ಅದರ ಮೇರೆಗೆ ಮಾಡಲು ಅವಕಾಶ ನೀಡಿದ ಯಾವುದೇ ಕಾರ್ಯ; ಅಥವಾ

(ಬಿ) ಹಾಗೆ ನಿರಸನಗೊಂಡ ಅಧಿನಿಯಮದ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ; ಅಥವಾ

(ಸಿ) ಹಾಗೆ ನಿರಸನಗೊಂಡ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ಯಾವುದೇ ದಂಡ, ಮುಟ್ಟುಗೋಲು ಹಾಕಿಕೊಳ್ಳುವಿಕೆ ಅಥವಾ ಉಂಟಾದ ಶಿಕ್ಷೆ; ಅಥವಾ

(ಡಿ) ಮೇಲೆ ಹೇಳಿರುವ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ದಂಡ, ಮುಟ್ಟುಗೋಲು ಹಾಕುವಿಕೆ ಅಥವಾ ಶಿಕ್ಷೆಯ ಸಂಬಂಧದಲ್ಲಿ ಯಾವುದೇ ವ್ಯವಹರಣೆ ಅಥವಾ ಪರಿಹಾರೋಪಾಯ

– ಇವುಗಳ ಮೇಲೆ ಯಾವುದೇ ಪರಿಣಾಮ ಬೀರತಕ್ಕದ್ದಲ್ಲ.

ಮತ್ತು ಆ ಅಧಿನಿಯಮವನ್ನು ನಿರಸನಗೊಳಿಸದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ವ್ಯವಹರಣೆ ಅಥವಾ ಪರಿಹಾರವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡ, ಮುಟ್ಟುಗೋಲು ಹಾಕಿಕೊಳ್ಳುವಿಕೆ ಅಥವಾ ಶಿಕ್ಷೆಯನ್ನು ವಿಧಿಸಬಹುದು ಅಥವಾ ಮಾಡಬಹುದು.

(3) ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ವಿನಿಯಮನ) ಅಧ್ಯಾದೇಶ, 1992 (1992ರ 11) ನ್ನು ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

*   *   *   *   *